Regd No BC 155 23-10-1969

SATYAVADI Daily, MYSORE 4 ★ 53 rd Year of Publication

ಸತ್ಯವಾದಿ

ಸುವರ್ಣ ಮಹೋತ್ಸವ ನಡೆಸಿದ ಪತ್ರಿಕೆ

Golden Jubilee Celebrated Paper

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [ 2 ಪೈಸೆ

# ಗಡಿ ಸಮಸ್ಯೆ – ಮರಾಟಿಗರು ಚಳವಳಿ ಹೂಡುವರಂತೆ

### ಸರಸ್ವತಿ ಉತ್ಸವ

ಮಂಗಳೂರು— 10 ದಿನಗಳ ಅದ್ದೂರಿ ಉತ್ಸವಾನಂತರ, ದೊಡ್ಡ ಸರಸ್ವತೀ ವಿಗ್ರಹವನ್ನು ಶೃಂಗರಿಸಿ ದೀಪಾಲಂಕಾರ ಮಾಡಿದ ಪಲ್ಲಕ್ಕಿಯಲ್ಲಿರಿಸಿ 3 ಮೈಲಿ ಮೆರವಣಿಗೆ ಮಾಡಿ, ಮಹಾಮಲ್ ದೇವಾಲಯದ ಕೆರೆಯಲ್ಲಿ ಬಿಡಲಾಯಿತು.

○

### ಪ್ರಧಾನಿ ರಾಜೀನಾಮೆಗೆ

ಮಂಗಳೂರು— ರಾಬರ್ಟ್‌ನಲ್ಲಿ ಭಾರತ ಕ್ಕಾದ ಅಪಮಾನಕ್ಕಾಗಿ ಪ್ರಧಾನಿ ಮತ್ತು ವಿದೇಶಾಂಗ ಮಂತ್ರಿಯವರು ರಾಜೀನಾಮೆ ಕೊಡಬೇಕೆಂಬ ಠರಾವನ್ನು ಜನ ಸಂಘ ಮಂಜೂರ್ಮಾಡಿತು.

★

### ಮಾರಕ್ಸಿಸ್ಟರ ಭಯೋತ್ಪಾದನೆ

ಕಲ್ಕತ್ತಾ ಅಸನಾಲ್ ಹತ್ತಿರ 5 ಕಲ್ಲಿ ಜ್ಜಲು ಗಣಿ ಭಾಗದಲ್ಲಿ ಮಾರಕ್ಸಿಸ್ಟರ ಭಯೋತ್ಪಾತ ಉಂಟಾಗಿದೆ ; ಘರ್ಷಣೆಯಲ್ಲಿ ಇಬ್ಬರು ಕಾರ್ಮಿಕರೂ, ಬಾಂಬು ತಯಾರಿಸುತ್ತಿದ್ದ ಒಬ್ಬನೂ ಸತ್ತರು.

★

### ಕೋಟಿ ಚಂಡಿ ಯಜ್ಞ

ಸುರೇಂದ್ರನಗರ– ಶ್ರೀ ಲಕ್ಷ್ಮಣ ಜೈತನ್ಯ ಸ್ವಾಮಿಯವರು ಮಾಡುವ ಕೋಟಿ ಚಂಡಿ ಯಜ್ಞ ಮುಂದಕ್ಕೆ ಹಾಕಲಾಗಿದ್ದು ಕೆಲಸಕಾರ್ಯಗಳು ಸಾಂಗವಾಗಿ ನಡೆಯುತ್ತಿದೆ : ಕಾನಪುರ ಗ್ರಾಮದ ಹತ್ತಿರ ಯಜ್ಞ ನಿನೇಶನದಲ್ಲಿ ಭಾರೀ ಡೇರೆಗಳು ಹಾಕಲ್ಪಟ್ಟು, ಭಾರೀ ಧ್ವಜಗಳು ಸ್ಥಾಪಿಸಲಾಗಿವೆ – ಸಾಮಿಗಳ ಹತ್ತಿರ ಇದ್ದ ರೂ. 35000 ಮೌಲ್ಯದ ಚಿನ್ನಾಭರಣಗಳು ಕಳುವಾಗಿದೆ.

### ಮೈಸೂರಿನ ಹೊಸ ಗೌರ್ನರರು

ನವದೆಹಲಿ— ಶ್ರೀ ಧನುಷ್ಕೋಡಿ ವೀರ್‌ರು ಮೈಸೂರು ಗೌರ್ನರರಾಗಿ ಇಂದು ಪ್ರಮಾಣ ವಚನ ಸ್ವೀಕರಿಸುವರು.

★

### ಮಹಾರಾಷ್ಟ್ರದ ಜಂಬಲ

ಬೊಂಬಾಯಿ— ಕಾಂಗ್ರೆಸಿಗರ ಹೋರಾಟದಲ್ಲಿ ಮಹಾರಾಷ್ಟ್ರ ಕಾಂಗ್ರೆಸ್ ಸಮಿತಿ ಪ್ರಧಾನಿಯವರ ಕಡೆ ಎಂದು ಸಮಿತಿ ಅಧ್ಯಕ್ಷರು ಹೇಳಿದರು.

●

### ಹೃದಯ ನೆಡುವುದು

ಮೆಕ್ಸಿಕೊ— ಅಂತರರಾಷ್ಟ್ರೀಯ ಹೃದಯ ಸಮ್ಮೇಳನದಲ್ಲಿ ಪ್ರತಿನಿಧಿಗಳು ಹೃದಯ ನೆಡುವುದರ ವಿರುದ್ಧ ಮತನೀಡಿದರು

★

### ಭಾರತಕ್ಕೆ ಅಮೇರಿಕಾ ಗೋಧಿ

ವಾಷಿಂಗ್ಟನ್— 20 ಮಿಲಿಯ ಡಾಲರು ( ರೂ 15.75 ಕೋಟಿ ) ಗಳಿಗೂ ಹೆಚ್ಚು ಹಣಕ್ಕೆ ಭಾರತವು ಗೋಧಿ ಕೊಳ್ಳಲು ಅಮೇರಿಕಾ ವ್ಯವಸಾಯ ಇಲಾಖೆ ಗಿಡಿಕಾರ ಕೊಟ್ಟಿದೆ..

### ಮರಾಟಿಗರ ಪ್ರಲಾಪ

ಬೆಳಗಾಂ— ಮಹಾರಾಷ್ಟ್ರ-ಮೈಸೂರುರು ಸಮಸ್ಯೆ ಕೂಡಲೇ ಪರಿಹರಿಸದಿದ್ದರೆ ಮೈಸೂರಿನಲ್ಲಿ ಮರಾಟಿಗರು ಚಳವಳ ಹೂಡುವರೆಂದು, ಮಹಾರಾಷ್ಟ್ರ ಏಕೀಕರಣ ಸಮಿತಿಯ 1000 ಕಾರ್ಯಕರ್ತರ ಸಭೆ ಸರಕಾರಕ್ಕೆ ಎಚ್ಚರಿಕೆ ನೀಡಿತು.

★

### ದುಷ್ಕೃತ್ಯ

ನವದೆಹಲಿ— ಜಮಿಯಾ ಮಿಲಿಯಾ ಕಾಲೇಜು ಕಟ್ಟಡಕ್ಕೆ ಯಾರೋ ಆರು ಜನ ಬೆಂಕಿ ಹತ್ತಿಸಿದರು — ಕೂಡಲೇ ಆರಿಸಲಾಯಿತು — ಪೋಲೀಸು ತನಿಖೆ ನಡೆಯುತ್ತಿದೆ.

★

### ದೇವಸ್ಥಾನಕ್ಕೆ ಅಪಾಯ

ಮದರಾಸು— ಸಮುದ್ರವು ಭೂಮಿಗೆ ನುಗ್ಗಿ ಬರುತ್ತಿರುವದು ತಿರುನಲ್ವೆಲ್ಲಿ ಜಿಲ್ಲೆ ತಿರುಚಂಗೋಡಿನ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಾಲಯಕ್ಕೆ ಅಪಾಯಕಾರಿಯಾಗಿದೆ – ಇದನ್ನು ತಪ್ಪಿಸಲು ದೇವಾಲಯದ ಪೂರ್ವಕ್ಕೆ ಕಲ್ಲಿನ ಗೋಡೆ ನಿರ್ಮಿಸಲು ದೇವಾಲಯದ ಆಡಳಿತದವರು ಕೇಂದ್ರ ಸರಕಾರಕ್ಕೆ ಮನವಿಮಾಡಿದ್ದಾರೆ.

### ಗಾಂಧೀಜೀ ಪ್ರಶಂಸೆ

ಲಂಡನ್— ಆಲ್ಬರ್ಟ್ ಹಾಲ್‌ನಲ್ಲಿ ನಡೆದ ಸಭೆಯಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ರವರೂ, ಬ್ರಿಟಿಷ್ ಪ್ರಧಾನಿಯವರೂ ಮಹಾತ್ಮಾ ಗಾಂಧಿಯವರನ್ನು ಮುಕ್ತಕಂಠದಿಂದ ಪ್ರಶಂಸಿಸಿದರು.

★

### ಅಕ್ರಮ ಸಾಗಾಣಿಕೆ ವಸ್ತುಗಳು

ಮದರಾಸು— ಮರಕಾಂತಕಂ ಹತ್ತಿರ ಕಸ್ಟಂಸರು ಒಂದು ಲಾರಿ ಆಡ್ಡಕಟ್ಟಿ ರೂ. 7.5 ಲಕ್ಷದ ಪೆ, ಟಾರ್ಚ್, ಲವಂಗ ಮುಂತಾದ್ದನ್ನು ವಶಪಡಿಸಿಕೊಂಡರು.

○

### ವಿದೇಶೀ ಪ್ರವಾಸಿಕರು

ನವದೆಹಲಿ— ಬರುವ ತಿಂಗಳುಗಳಲ್ಲಿ ವಿದೇಶೀ ಪ್ರವಾಸಿಕರ ಸಂಖ್ಯೆ 200000 ಕ್ಕಿಂತ ಹೆಚ್ಚುವ ಸಂಭವವಿದೆ.

○

### ರಕ್ತಕ್ಕಿಂತ ಜಪ್ಪ

ತ್ರಿವೇಂಡ್ರಂ— ರಾಜಕೀಯವು ರಕ್ತಕ್ಕಿಂತ ಗಟ್ಟಿಯಾಗಿದೆ ಎಂದು ಕೇರಳ ಶಾಸನ ಸಭೆಯಲ್ಲಿ ಪಿಎಸ್ಪಿ ಸದಸ್ಯರೊಬ್ಬರು ಹೇಳಿದರು.

●

### ಅಕ್ಕಿ ಬೆಲೆ ಇಳಿತ

ಕಲ್ಲೀಕೋಟಿ— ಅಕ್ಕಿ ಬೆಲೆ 75 ಕಿಲೊ ಮೂಟೆಗೆ ರೂ 20 ಇಳಿದಿದೆ.

●

### ಜಂಖಾನಾ ರೇಸೆಸ್

ಮೈಸೂರಿನಲ್ಲಿ ಈ ತಿಂಗಳು ತಾ॥ 24 ರಿಂದ ಜಂಖಾನಾ ರೇಸುಗಳು ಪ್ರಾರಂಭವಾಗುವವು.

ತಾ. 24–10–69 ನೇ ಶುಕ್ರವಾರದಿಂದ ಉದ್ಘಾಟನೆ

... ದಿನ 3 ಆಟಗಳು .... ಪ್ರಾರಂಭ

ಒಲಂಪಿಯಾ ಮತ್ತು ಶ್ರೀ ಚಿತ್ರಮಂದಿರಗಳಲ್ಲಿ

ದಿನ : 2–30, 6 ಮತ್ತು 9–30 ಕ್ಕೆ ದಿನ : 3, 6–30, 10 ಕ್ಕೆ

ಟೋನಿವಾಕರ್‌ರವರ ವರ್ಷದ ಅತ್ಯುನ್ನತ ಪತ್ತೇದಾರಿ, ಸಂಗೀತಭರಿತ

ವರ್ಣರಂಜಿತ ಚಿತ್ರ ಬಾ ಜಿ (ಹಿಂದಿ)

ಪಾತ್ರ– ಧರ್ಮೇಂದ್ರ, ವಹೀದಾ ರೆಹಮಾನ್, N. A. ಅನ್ಸಾರಿ, ಮತ್ತು ಜೋನಿವಾಕರ್

ಸಂಗೀತ: ಕಲ್ಯಾಣ್‌ಜೀ ಆನಂದ್‌ಜೀ – ನಿರ್ದೇಶನ: ಮೋನಿ ಭಟ್ಟಾಚಾರ್ಯಜೀ

## ವಿವಿಧ ವಿಷಯಗಳು

ಬೆಂಗಳೂರು— ಮುತ್ಯಾಲಮಡುವಿನ ಪ್ರವಾಹದಲ್ಲಿ 6 ಮಂದಿ ಸತ್ತರು.

ಮದರಾಸು— 80 ವರ್ಷದಿಂದ ಕಾಣದಿದ್ದ ಬಹು ಭಾರಿ ಮಳೆಯಾಯಿತು : ಸುಳಿ ಹಾವಳಿಯಲ್ಲಿ 7 ಮಂದಿ ಸತ್ತರು.

ವಾಷಿಂಗ್ಟನ್— ಮುಂದಿನ ತಿಂಗಳು ಅಪೊಲೊ 12 ರಲ್ಲಿ ಹೋಗುವ ಗಗನಯಾನಿಗಳು ಚಂದ್ರನ ಮೇಲೆ ಮತ್ತೊಂದು ಅಮೇರಿಕಾ ಧ್ವಜ ಸ್ಥಾಪಿಸುವರು.

ಚಂಡಿಘರ್— ಚಂಡಿಘರಿನ ಭವಿಷ್ಯ ನಿರ್ಧಾರದಲ್ಲಿ, ಅಲ್ಲಿನ ಜನರ ಅಭಿಪ್ರಾಯವನ್ನು ಗಮನಿಸಲಾಗುವದೆಂದು ಶ್ರೀ ಚಾಂದ್ ಗ್ಲೋಯಾಲರಿಗೆ ಪ್ರಧಾನಿ ಇಂದಿರಾರವರು ಬರೆದಿರುವರು.

### ಭಾರತದಲ್ಲಿ ಭಾರತೀಯನು ತಯಾರಿಸಿದ ವಿಮಾನ

1895 ರಲ್ಲಿ ವೇದವಿದ್ವಾಂಸರೂ ಮತ್ತು ಕಲಾಶಾಲೆಯ ಉಪಾಧ್ಯಾಯರೂ ಆಗಿದ್ದ ಶ್ರೀ ಶಿವಕಾರ ತಳಪಡೆಯವರು, ಋಗ್ವೇದ, ಭಾರದ್ವಾಜ ಸಂಹಿತೆಯಲ್ಲಿ ಸಿರುವಂತೆ, ವಿಮಾನ ತಯಾರಿಸಿ ಅದರಲ್ಲಿ 1500 ಅಡಿ ಎತ್ತರ ಹೋಗಿ ಬಂದರು. ಈ ಕಾರ್ಯದಲ್ಲಿ ಅವರಿಗೆ ವೇದವಿದ್ವಾಂಸರೂ, ಶಿಲ್ಪ ಕಲಾ ಪಾರಂಗತರಾಗಿದ್ದ ಅವರ ಪತ್ನಿ ನೆರವಾಗಿದ್ದರು. ಸ್ವಲ್ಪ ಕಾಲಾನಂತರ ಈಕೆಯು ನಿಧನರಾಗಲು ಆತನು ವ್ಯಸನಾಕ್ರಾಂತನಾಗಿ, ಎಲ್ಲ ವಿಷಯಗಳಲ್ಲೂ ಮಮತೆ ತಪ್ಪಿತು. ಈತನು 1917 ರಲ್ಲಿ ಕಾಲವಾದನಂತರ, ಆತನ ಬಂಧುಗಳು ಆ ವಿಮಾನವನ್ನು ಬೊಂಬಾಯಿನಲ್ಲಿದ್ದ ಬ್ರಿಟಿಷ್ ರಫ್ತು ಕಂಪೆನಿ ಯ್ಯಾಲಿ ಬ್ರದರ್ಸ್‌ರಿಗೆ ಮಾರಿಬಿಟ್ಟರು.


ವುಡ್‌ಲ್ಯಾಂಡ್ ತಾ. 10-10-69 ರಿಂದ

ಅಮೋಘ ಪ್ರಾರಂಭ

— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮೆನ್ ಕಲರ್ —

ಹಸೀನಾ ಮಾನ್ ಜಾಯೇಗಿ

ಶಶಿಕಪೂರ್ ಬಬೀತಾ ಜಾನೀವಾಕರ್

ಸಂಗೀತ : ಕಲ್ಯಾಣಜಿ ಆನಂದಜಿ

[ ದಿನ 3 ಪ್ರದರ್ಶನಗಳು ]

ಅಪೇರಾ— 10-10-69 ರಿಂದ

.... ಅಮೋಘ ತಮಿಳು ಚಿತ್ರ ....

ಎಂಗವೀಟ್ಟು ಪಿಳ್ಳೈ

ಪಾತ್ರ— ಎಂ. ಜಿ. ಆರ್ ಬಿ. ಸರೋಜಾದೇವಿ ಎಸ್. ವಿ. ರಂಗರಾವ್ ನಾಗೇಶ್ ತಂಗವೇಲು ( ಹೊಸ ಕಾಪಿ )

ದಿನ 3 ಆಟಗಳು

ಅಖಿಲ ಭಾರತದಲಿ ಕೂಡಲೇ ಗೋವಧೆ ನಿಷೇಧವಾಗಲಿ

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ

ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ

ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ

ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00

ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ವೈಶದ ಫಿತ್ತಕಾಗಿ

ಕುಟುಂಬ ಯೋಜನೆ

SHAKTI

SUDHA

A Superb Tonic

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಸಫಲವಾಗಿ ನಡೆಯಲಿ

ಗೋರಕ್ಷಣಾಶ್ರಮ ಬೆಂಜಲ ವೀಧಿ

Protect the Cow



Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M. S. Krishna Rao ( Proprietor ) at the Satyavadi Press Chamarajapura, Mysore